**ಎಮ್ ವಿ ಸಿ ನಂಃ 204/2024**
**ಆರ್.ಡಬ್ಲ್ಯೂಃ 1,**

**ಸಾಕ್ಷಿಯನ್ನು ದಿನಾಂಕ : 23-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್ -1- ಪಾಲಸಿ ಕಾಫಿ ನಕಲು

**ಪಾಟಿ ಸವಾಲು: ಶ್ರೀ. ಬಿ.ಡಿ.ಎಮ್. ಅರ್ಜಿದಾರ ಪರ ವಕೀಲರಿಂದ :**

ಅಪಘಾತ ಸಮಯದಲ್ಲಿ ಲಾರಿ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಈ ಅಪಘಾತದ ದೂರು ಮತ್ತು ಅಂತಿಮ ವರದಿ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಈ ಅಪಘಾತದಲ್ಲಿ ತನಿಖಾಧಿಕಾರಿ ಸಂಪೂರ್ಣ ತನಿಖೆ ಮಾಡಿ ಲಾರಿ ಚಾಲಕನ ವಿರುದ್ದ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಸಂಪೂರ್ಣ ಸುಳ್ಳಿನಿಂದ ಕೂಡಿದೆ ಎಂದು ನುಡಿಯುತ್ತಾರೆ. ಸದರಿ ಅಂತಿಮ ವರದಿ ಪ್ರಕಾರ ಬೈಕ ಸವಾನ ಯಾವುದೇ ತಪ್ಪು ಇಲ್ಲ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ . ಸದರಿ ಅಪಘಾತ ರಾತ್ರಿ ವೇಳೆ ಆಗಿದೆ ಎಂದರೆ ಸರಿ. ಲಾರಿ ಚಾಲಕ ವೇಗದಲ್ಲಿ ಇದ್ದಾಗ ಒಮ್ಮೇಲೆ ಬ್ರೇಕ್ ಹಾಕಿದಾಗ ಮುಂದೆ ಇರುವ ವಾಹನ 15 ಅಡಿ ದೂರು ಇದ್ದರೂ ಸಹ ಬ್ರೇಕ ಹಾಕಿದಾಗ ಆ ವಾಹನಕ್ಕೆ ತಾಗುತ್ತದೆ ಎಂದರೆ ಸರಿಯಲ್ಲ.

**ಎಮ್ ವಿ ಸಿ ನಂಃ 204/2024**
**ಆರ್.ಡಬ್ಲ್ಯೂಃ 1,**

ವಾಹನಕ್ಕೆ ವಿಮೆ ನೀಡುವಾಗ ಫಿಟೆನೆಸ್ಸ ಮತ್ತು ಪರಮಿಟ್ ಪರಿಶೀಲನೆ ಮಾಡಿ ನೀಡುತ್ತೇವೆ ಎಂದರೆ ಸಾಕ್ಷಿ ಆರ್. ಸಿ. ಮಾತ್ರ ನೋಡುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಅಪಘಾತ ಪಡಿಸಿದ ಲಾರಿಗೆ ಫಿಟನೆಸ್ ಮತ್ತು ಪರಿಮಿಟ್ ಇದ್ದರೂ ಸಹ ಈಗ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಪರಿಹಾರ ನೀಡವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನನೆಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**